ವಿಷಯ : - ಹಾಸನ ಪಟ್ಟಣದ ಸಿಟಿ ಕೋ- ಆಪರೇಟಿವ್ ಬ್ಯಾಂಕನ್ನು ಸೂಪರ್ ಸೀಡ್ ಮಾಡಿರುವ ಬಗ್ಗೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 354(608)

ಶ್ರೀ ಕೆ.ಹೆಚ್. ಹನುಮೇಗೌಡ(ಹಾಸನ)

ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಪಟ್ಟಣದ ಸಿಟಿ ಕೋ-ಆಪರೇಟಿವ್ ಬ್ಯಾಂಕನ್ನು ಯಾವ ತಾರೀಖಿನಿಂದ ಸೂಪರ್‌ಸೀಡ್ ಮಾಡಲಾಯಿತು.

ಆ) ಈ ರೀತಿ ಸರ್ಕಾರದವರು ಸೂಪರ್‌ಸೀಡ್ ಮಾಡಲು ಕಾರಣಗಳೇನು?

ಇ) ಸದರಿ ಬ್ಯಾಂಕ್ ಸೂಪರ್ ಸೀಡ್ ಆದ ನಂತರ ಬ್ಯಾಂಕಿನಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ಸರ್ಕಾರದವರು ಇದುವರೆಗೆ ಕೈಗೊಂಡಿರುವ ಕ್ರಮಗಳೇನು?

ಈ) ಬ್ಯಾಂಕಿನಲ್ಲಿ ನಡೆದಿರುವ ಅಕ್ರಮಗಳಿಂದ ಎಷ್ಟು ಹಣ ನಷ್ಟವಾಗಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು)

ದಿನಾಂಕ : 26-08-1991.

ಬ್ಯಾಂಕು ಸಹಕಾರ ಸಂಘಗಳ ಕಾಯಿದೆ ನಿಯಮಗಳು ಹಾಗೂ ಉಪನಿಬಂಧನೆಗಳಿಗೆ ವ್ಯತಿರಿಕ್ತವಾಗಿ ಕೆಲಸ ನಿರ್ವಸುತ್ತಿರುವ ಕಾರಣಗಳ ಮೇರೆಗೆ, ಆಡಳಿತ ಮಂಡಳಿಯ ಮೇಲೆ 15 ಆರೋಪಗಳನ್ನು ಮಾಡಿ ಬ್ಯಾಂಕನ್ನು ಸೂಪರ್‌ಸೀಡ್ ಮಾಡಲಾಗಿದೆ.

ವಿಶೇಷಾಧಿಕಾರಿಗಳು ಸೂಪರ್‌ಸೀಡ್ ಆದೇಶದಲ್ಲಿ ನಮೂದಿಸಲಾಗಿರುವ ಆರೋಪಗಳನ್ನು ಸರಿಪಡಿಸುವಲ್ಲಿ ಬ್ಯಾಂಕು ಕ್ರಮ ಕೈಗೊಂಡಿರುತ್ತದೆ. ಈ 15 ಆರೋಪಗಳ ಪೈಕಿ 12 ಆರೋಪಗಳನ್ನು ಪೂರ್ಣವಾಗಿಯೂ ಒಂದು ಆರೋಪವನ್ನು ಭಾಗಶಃ ಸರಿಪಡಿಸಲಾಗಿದೆ. ಉಳಿದ ಎರಡು ಆರೋಪಗಳ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಬ್ಯಾಂಕಿನಲ್ಲಿ ನಡೆದಿರುವ ಅಕ್ರಮಗಳಿಂದ ನಷ್ಟ ಉಂಟಾಗಿದೆ ಎಂದು ಹೇಳಲು ಬರುವುದಿಲ್ಲ. 1991-92ನೇ ಸಾಲಿನವರೆಗೂ ಇಲಾಖೆಯಿಂದ ಲೆಕ್ಕ ತಪಾಸಣೆ ನಡೆದಿದ್ದು, ಸದರಿ ವರದಿಗಳಲ್ಲಿ ಈ ರೀತಿಯ ಯಾವುದೇ ನಷ್ಟದ ಬಾಬ್ತುಗಳನ್ನು ಗುರುತಿಸಿರುವುದಿಲ್ಲ. 1992-93ನೇ ಸಾಲಿನ ತಾತ್ಕಾಲಿಕ ಆಸ್ತಿ-ಜವಾಬ್ದಾರಿ ತಃಖ್ತೆಯಂತೆಯೂ ಸಹ ನಷ್ಟ ಉಂಟಾಗಿರುವುದಿಲ್ಲ. ಆದರೆ ಕಟ್ಟಡದ ನಿರ್ಮಾಣದಲ್ಲಿ ಹಾನಿ ಉಂಟಾಗಿರುವ ಬಗ್ಗೆ ತನಿಖೆ ಮುಗಿದ ನಂತರ ನಷ್ಟದ ಬಗ್ಗೆ ತಿಳಿಯುತ್ತದೆ.

ವಿಷಯ : - ಮೈಸೂರು ಜಿಲ್ಲೆಯಲ್ಲಿನ ಮಳೆಯ ಪ್ರಮಾಣದ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 335(594)

ಶ್ರೀ ಬಿ. ರಾಜುಗೌಡ(ಹನೂರು)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ಜಿಲ್ಲೆಯಲ್ಲಿ ಈ ವರ್ಷ ಇದುವರೆವಿಗೆ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಮಳೆಯಾಗಿದೆ;

ಆ) ಕಳೆದ ಮೂರು ವರ್ಷಗಳಿಂದ ಶೇಕಡಾ ಎಷ್ಟರಷ್ಟು ಕಡಿಮೆಯಾಗಿದೆ;